ಶ್ರೀ ಟಿ. ಪಿ. ಬೋರಯ್ಯ.—ನೀರು ಸರಬರಾಯಿ ಮಾಡದೇ ಇರುವುದು ಸುಮಾರು 10 ಸಾವಿರ ಚಿಲ್ಲರೆ ಎಕರೆ ಆಗುತ್ತದೆ. ಇದಕ್ಕೆ ನೀರನ್ನು ಸರಬರಾಯಿ ಮಾಡಬೇಕಾದರೆ ಏನು ವ್ಯವಸ್ಥೆ ಮಾಡಿದ್ದೀರಿ ಮತ್ತು ಎಷ್ಟು ಕಾಲ ಬೇಕಾಗುತ್ತದೆ ?

† ಶ್ರೀ ವೀರೇಂದ್ರ ಪಾಟೀಲ್.—ನೀರು ಸರಬರಾಯಿ ಆಗಲಾರದೇ ಇರುವಂತಹ ಪ್ರದೇಶ ಇರುವುದಕ್ಕೆ ಅನೇಕ ಕಾರಣಗಳು ಇವೆ. ಕೆ. ಆರ್. ಎಸ್. ಸ್ಕೀಂ ಮಂಜೂರಾದ ಕಾಲದಲ್ಲಿ ಇದ್ದ ಕ್ರಾಪಿಂಗ್ ಪ್ಯಾಟ್ರನ್‌ಗೂ ಆ ನಂತರದ ಪ್ಯಾಟ್ರನ್‌ಗೂ ವ್ಯತ್ಯಾಸ ಇದೆ. ಅದು ಒಂದು ಪೂರ್ತಿ ಎರಡು ಫರ್ಲಾಂಗ್ ಡ್ರೈ ಬೆಲ್ಟ್ ಇದ್ದರೆ ಈಗ ಒಂದು ಫರ್ಲಾಂಗ್ ಆಗಿ ಇವಾಪೋರೇಷನ್ ಮುಂತಾದುವು ಹೆಚ್ಚಾಗುತ್ತಾ ಇದೆ. ಹೀಗಾಗಿ ಟೇರ್ ಎಂಡ್‌ನಲ್ಲಿರತಕ್ಕ ಜಮೀನಿಗೆ ನೀರು ಬರುತ್ತಿಲ್ಲ. ಒರಿಜಿನಲ್ ಸ್ಕೀಂನಲ್ಲಿ 2,200 ಕ್ಯೂಸೆಕ್ಸ್ ನಲುವಾಗಿ ಡಿಸೈನ್ ಮಾಡಿದ್ದರು ಈಗ 2,300 ಕ್ಯೂಸೆಕ್ಸ್ ಕೊಡುತ್ತಾ ಇದ್ದೇವೆ.

ಶ್ರೀ ಬಿ. ದೊಡ್ಡಬೋರೇಗೌಡ.—ತಾವು ನೀರು ಸರಬರಾಯಿ ಮಾಡುತ್ತಾ ಇರುವುದು ಬ್ರಾಂಚ್ ನಾಲೆಗಳಿಗೂ ಸರಬರಾಯಿ ಆಗುತ್ತಾ ಇದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇದು ಒರಿಜಿನಲ್ ಚಾನಲ್ಸ್, ನೀರು ಎಷ್ಟು ಪ್ರಮಾಣದಲ್ಲಿ ಇದೆ ಎಂಬುದನ್ನು ನೋಡಿಕೊಂಡು ಆಫ್ ಅಂಡ್ ಅನ್ ಮಾಡಿ ಬಿಡುತ್ತಾ ಇದ್ದೇವೆ.

ಶ್ರೀ ಎಂ ಬಸವರಾಜು.—ಒರಿಜಿನಲ್ ಪ್ಲಾನ್‌ಗಿಂತ ಹೆಚ್ಚು ನೀರು ಬಿಡುತ್ತಾ ಇರುವುದರಿಂದ ಅನೇಕ ಜಮೀನುಗಳಿಗೆ ನೀರು ಸಾಲುತ್ತಾ ಇಲ್ಲ. ಇದರ ನಲುವಾಗಿ ಇರಿಗೇಷನ್ ಕಮಿಟಿ ಮಾಡಿ ರೈತರಿಗೆ ಪ್ಯೂಜ್ಞಾನಿಕವಾಗಿ ನೀರಿನ ಉಪಯೋಗ ಹೇಗೆ ಪಡೆಯಬೇಕೆಂಬುದನ್ನು ಮತ್ತು ಕ್ರಾಪಿಂಗ್ ಪಾಟ್ರನ್ ಹೇಗೆ ಮಾಡಬೇಕೆಂಬುದನ್ನು ತಿಳಿಸದೇ ಇರುವುದರಿಂದ ಈ ರೀತಿ ಅನಾಯಕತ್ವ ಆಗಿದೆ ಎಂದು ಹೇಳುತ್ತೇನೆ. ಇದನ್ನು ವಿಚಾರ ಮಾಡಿ ಉತ್ತಮ ಸ್ಥಿತಿಗೆ ತರಲು ಏನು ಕಾರ್ಯಕ್ರಮ ತೆಗೆದುಕೊಳ್ಳುತೀರಿ ?

ಶ್ರೀ ವೀರೇಂದ್ರ ಪಾಟೀಲ್—ಇದರ ನಲುವಾಗಿ ಕನ್‌ಸರ್ವೇಟೀವ್ ಕಮಿಟಿ ಅಂತ ಮಾಡಿದ್ದೇವೆ. ಎಷ್ಟು ಪ್ರಮಾಣದಲ್ಲಿ ನೀರನ್ನು ಬಿಡಬೇಕು, ಯಾವಾಗ ಬಿಡಬೇಕು ಎಂಬುದನ್ನು ಆ ಕಮಿಟಿಯವರು ನಿರ್ಧಾರಮಾಡುತ್ತಾರೆ. ಈ ಮಧ್ಯೆ ಕ್ರಾಪಿಂಗ್ ಪ್ಯಾಟ್ರನ್ ಬದಲಾವಣೆಯಾಗಿರುವುದರಿಂದ ನೀರು ಕಡಿಮೆ ಬೀಳುವಂತಹ ಪ್ರಶ್ನೆ ಬಂದಿದೆ.

Work entrusted to the Tax Inspectors and Bill Collectors

400. **Sri T. R. SHAMANNA (Fort).**—

Will the Minister for Home and Municipal Administration be pleased to state :—

(*a*) whether it is a fact that even after the recent amendments to the Corporation Act for non-service of demand notices, the same staff is maintained and the work entrusted to these Tax Inspectors and Bill Collectors ;

(*b*) whether Government are aware that there is a lot of harassment by the indiscriminate issue of Distress Warrants arbitrarily by the Tax Collectors by issuing facsimile distress warrants to the property owners ;

(*c*) if so, the number of warrants issued in the past three months ?

A.—Sri R. M. PATIL (Minister for Home and Municipal Administration).—

(*a*) Yes ; they are to collect taxes from the property owners.

(*b*) No harassment is caused. The warrants are issued when considered absolutely necessary.

(*c*) 20,280.

ಶ್ರೀ ಟಿ. ಆರ್. ಶಾಮಣ್ಣ.—ಈಗ 20 ಸಾವಿರದ 280 ಡಿಸ್ಟ್ರೆಸ್ ವಾರಂಟುಗಳನ್ನು ಇಷ್ಯೂ ಮಾಡಿದೆ ಎಂದು ಹೇಳಿದ್ದೀರಿ. ಬೆಂಗಳೂರು ನಗರದಲ್ಲಿರತಕ್ಕ ಮನೆಗಳು ಸುಮಾರು 90 ಸಾವಿರ. 20 ಸಾವಿರದ 280 ಡಿಸ್ಟ್ರೆಸ್ ವಾರಂಟ್‌ಗಳನ್ನು ಇಷ್ಯೂ ಮಾಡಲಾಗಿದೆ. ಟ್ಯಾಕ್ಸ್ ಕಲೆಕ್ಟರ್ಸ್ ಕೈಯಲ್ಲಿ ಬ್ಲ್ಯಾಂಕ್ ಫಾರಂಗಳು ಇದ್ದು ಅವರು ಅದರ ಮೇಲೆ ಫ್ಯಾಸಿಮಿಲಿ ಒತ್ತಿ, ಅದನ್ನು ದುರುಪಯೋಗ ಮಾಡಿ ಜನರಿಗೆ ಕೊಂದರೆಯಾಗುತ್ತಾ ಇರುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ ? ನೂರಾರು ಬ್ಲ್ಯಾಂಕ್ ಫಾರಂಗಳು ಒಬ್ಬೊಬ್ಬರ ಹತ್ತಿರ ಇದೆ, ಅದನ್ನು ದುರುಪಯೋಗ ಮಾಡಿ ಲೂಟಿ ಮಾಡುತ್ತಾ ಇರುವುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದರೆ ಅದನ್ನು ತಪ್ಪಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

†ಶ್ರೀ ಆರ್. ಎಂ. ಪಾಟೀಲ್.—20 ಸಾವಿರದ 280 ಡಿಸ್ಟ್ರೆಸ್ ವಾರಂಟ್ ತೆಗೆದಿದ್ದಾರೆ ಅದರಲ್ಲಿ 23 ಮಾತ್ರ ಜಾರಿ ಮಾಡಲಾಗಿದೆ.

ಶ್ರೀ ಟಿ. ಆರ್. ಶಾಮಣ್ಣ.—ಈಗ ತಾವು 18 ಜನ ಪೋಲೀಸ್ ಕಾನ್‌ಸ್ಟೇಬಲ್ ಮತ್ತು ಒಬ್ಬ ಸಬ್ ಇನ್‌ಸ್ಪೆಕ್ಟರನ್ನು ಓದಗಿಸಿಕೊಟ್ಟು ರಾತ್ರಿ ಮುಖಾಂತರ ಮನೆಗಳಿಗೆ ಹೋಗಿ ಮನೆಯಲ್ಲಿ ಇರತಕ್ಕಂಥ ಪಾತ್ರೆ, ಪರವಡೆ, ಸ್ಟೌಕರ್ ತೆಗೆದುಕೊಂಡು ಜನಗಳಿಗೆ ವಿಪರೀತ ಕಿರುಕುಳ ಕೊಡುತ್ತಿದ್ದಾರೆ, ಹಾಗೆ ಮಾಡುತ್ತಾ ಇಲ್ಲ ಎನ್ನುವ ಬಗ್ಗೆ ಖಾತ್ರಿ ಹೇಳುತ್ತೀರಾ ? ಅಂತಹ ನೂರಾರು ಕೇಸುಗಳನ್ನು ತಂದುಕೊಟ್ಟರೆ ಮಾನ್ಯ ಮಂತ್ರಿಗಳು ಏನು ಹೇಳುತ್ತೀರಿ ?

ಶ್ರೀ ಆರ್. ಎಂ. ಪಾಟೀಲ್.—ಈ ತರಹ ವರದಿ ಬಂದಿಲ್ಲ. ಅದನ್ನು ತಂದುಕೊಟ್ಟರೆ ವಿಚಾರ ಮಾಡುತ್ತೇನೆ.

ಶ್ರೀ ಎಂ. ನಾಗಪ್ಪ.—20,280 ಡಿಸ್ಟ್ರೆಸ್ ವಾರಂಟ್ಸ್ ಕೊಟ್ಟಿದ್ದಾರೆ ಎಂದು ಹೇಳುತ್ತೀರಿ. ಅದರಲ್ಲಿ 1964 ರಲ್ಲಿ ಸೇರಿದಂಥ 28 ಹಳ್ಳಿಗಳೂ ಇವೆ ಅಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ಅದರಲ್ಲಿ ಇದ್ದರೂ ಇರಬಹುದು.

ಶ್ರೀ ಟಿ. ಆರ್. ಶಾಮಣ್ಣ.—ಈಗ ವ್ಯಾಪಾರ್ ಟ್ಯಾಕ್ಸ್ ಎಷ್ಟು ? ಅದರಲ್ಲಿ ಕಲೆಕ್ಷನ್ ಎಷ್ಟು ಆಗಿದೆ. ಇದರ ಬಗ್ಗೆ ಏನಾದರೂ ಮಾಹಿತಿ ಇದೆಯೇ ? ಇಲ್ಲದಿದ್ದರೆ ನಾನು ಹೇಳುತ್ತೇನೆ. ಅಡ್ಮಿನಿಸ್ಟ್ರೇಟರ್ ಅಧಿಕಾರದಲ್ಲಿ ಅಧಿಕಾರ ಚೆನ್ನಾಗಿ ಇದೆ ಎಂದು ತೋರಿಸುವುದಕ್ಕೆ ಕಲೆಕ್ಷನ್ ಚೆನ್ನಾಗಿ ಆಗುತ್ತಾ ಇದೆ ಎಂದು ಜನಗಳಿಗೆ ಕಿರುಕುಳ ಕೊಡುತ್ತಾರೆ ಎನ್ನುವ ವಿಚಾರ ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೇ ? ಟ್ಯಾಕ್ಸ್ ಇನ್‌ಸ್ಪೆಕ್ಟರ್ಸ್‌ಗೆ ಸಂಬಳ ಕೊಡದೆ, ಹಾಫಾಕಾರ ಉಂಟಾಗಿ ಸಂಬಳ ಕೊಡಿಸಿದ್ದರೆ ಲಂಚ ತೆಗೆದುಕೊಳ್ಳುತ್ತೇವೆ ಎನ್ನುವ ಸ್ಥಿತಿಗೆ ಬಂದಿದೆ, ಇದರಿಂದಾಗಿ ಅವರು ಜನಗಳಿಗೆ ವಿಪರೀತ ತೊಂದರೆಯನ್ನು ಕೊಡುತ್ತಿದ್ದಾರೆ. ಇದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಯಾವುದಾದರೂ ಒಂದು ಪ್ರಶ್ನೆ ಕೇಳಿದರೆ ಉತ್ತರ ಹೇಳಬಹುದು. ಎಕ್ಸೆಡ್ ಕೊಶ್ಚನ್ ಕೇಳಿದರೆ ಹೇಳುವುದಕ್ಕಾಗುವುದಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಟ್ಯಾಕ್ಸ್ ಇನ್‌ಸ್ಪೆಕ್ಟರುಗಳಿಗೆ ಟ್ಯಾಕ್ಸ್ ಸರಿಯಾಗಿ ಕಲೆಕ್ಟ್ ಮಾಡುತ್ತಾ ಇಲ್ಲ ಎಂದು ಸಂಬಳ ನಿಲ್ಲಿಸಿದ್ದು ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲ.

ಶ್ರೀ ಎಂ. ನಾಗಪ್ಪ.—28 ಹಳ್ಳಿಗಳಿಗೆ ಟ್ಯಾಕ್ಸ್ ಹಾಕಿದ್ದೀರಿ. ಗಾಂಧಿನಗರದವರಿಗೂ ಹಳ್ಳಿಗಳಿಗೂ ಆಗಿರುವ ರೇಷಿಯೋ ಒಂದೇ ಅಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ಅದು ಆಯಾಯ ಪಕ್ಕದ ಆಸ್ತಿಯ ಬೆಲೆಯ ಮೇಲೆ ಹೋಗುತ್ತದೆ.